**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 1. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1641 |
| 2. | ಸದಸ್ಯರ ಹೆಸರು | : | ಶ್ರೀ ತಿಪ್ಪಣ್ಣಪ್ಪ ಕಮಕನೂರ |
| 3. | ಉತ್ತರಿಸುವ ದಿನಾಂಕ | : | 18/03/2026 |
| 4. | ಉತ್ತರಿಸುವ ಸಚಿವರು | : | ಮಾನ್ಯ ಲೋಕೋಪಯೋಗಿ ಸಚಿವರು |

<table>
<tr><th>ಕ್ರ. ಸಂ.</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲಬುರಗಿ ಜಿಲ್ಲೆಯಲ್ಲಿ ಪ್ರಸ್ತುತ ಅತ್ಯಂತ ಜೀರ್ಣಾವಸ್ಥೆಯಲ್ಲಿರುವ ಮತ್ತು ತುರ್ತು ದುರಸ್ತಿ ಅಗತ್ಯವಿರುವ ಒಟ್ಟು ಸರ್ಕಾರಿ ಕಟ್ಟಡಗಳ ಸಂಖ್ಯೆ ಎಷ್ಟು; (ಇಲಾಖಾವಾರು ಮತ್ತು ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)</td><td>ಕಲಬುರಗಿ ಜಿಲ್ಲೆಯಲ್ಲಿ ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿಯ ವ್ಯಾಪ್ತಿಯಲ್ಲಿ ಪ್ರಸ್ತುತ ಅತ್ಯಂತ ಜೀರ್ಣಾವಸ್ಥೆಯಲ್ಲಿರುವ ಮತ್ತು ತುರ್ತು ದುರಸ್ತಿ ಅಗತ್ಯವಿರುವ ಸರ್ಕಾರಿ ಕಟ್ಟಡಗಳ ತಾಲ್ಲೂಕವಾರು ಮಾಹಿತಿ ಈ ಕೆಳಗಿನಂತಿವೆ:-
<table>
<tr><th>ಕ್ರ. ಸಂ.</th><th>ಉಪ-ವಿಭಾಗ</th><th>ಜೀರ್ಣಾವಸ್ಥೆಯಲ್ಲಿರುವ ಕಟ್ಟಡಗಳು ಸಂಖ್ಯೆ</th><th>ದುರಸ್ತಿ ಅಗತ್ಯವಿರುವ ಕಟ್ಟಡಗಳು ಸಂಖ್ಯೆ</th></tr>
<tr><td>1</td><td>ಕಲಬುರಗಿ</td><td>64</td><td>0</td></tr>
<tr><td>2</td><td>ಆಳಂದ</td><td>0</td><td>0</td></tr>
<tr><td>3</td><td>ಅಫಜಲಪುರ</td><td>12</td><td>0</td></tr>
<tr><td>4</td><td>ಜೇವರ್ಗಿ</td><td>16</td><td>0</td></tr>
<tr><td>5</td><td>ಸೇಡಂ</td><td>0</td><td>0</td></tr>
<tr><td>6</td><td>ಚಿತ್ತಾಪುರ</td><td>102</td><td>0</td></tr>
<tr><td>7</td><td>ಚಿಂಚೋಳಿ</td><td>6</td><td>5</td></tr>
<tr><td></td><td>ಒಟ್ಟು</td><td>200</td><td>5</td></tr>
</table></td></tr>
<tr><td>ಆ)</td><td>ಕಳೆದ ಒಂದು ವರ್ಷದಲ್ಲಿ ಜಿಲ್ಲೆಯ ಸರ್ಕಾರಿ ಕಟ್ಟಡಗಳ ವಾರ್ಷಿಕ ನಿರ್ವಹಣೆಗಾಗಿ (Annual Maintenance) ಜಿಲ್ಲೆಯ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ (HPC) ಕಟ್ಟಡಗಳ ಸುರಕ್ಷತಾ ಪರಿಶೀಲನೆಯನ್ನು (Safety Audit) ನಡೆಸಲಾಗಿದೆಯೇ; ನಡೆಸಿದ್ದಲ್ಲಿ,</td><td>ಕಲಬುರಗಿ ಜಿಲ್ಲೆಯ ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿಯ ವ್ಯಾಪ್ತಿಯಲ್ಲಿ ಗ್ರಾಮೀಣ ಭಾಗದ ಸರ್ಕಾರಿ ಶಾಲೆಗಳು ಮತ್ತು ಪ್ರಾಥಮಿಕ ಆರೋಗ್ಯ ಕೇಂದ್ರಗಳ (HPC) ಕಟ್ಟಡಗಳ ಸುರಕ್ಷತಾ/ನೆಲಸಮಗೊಳಿಸಲು ಅನುಮತಿಗಾಗಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ. ಅದರಂತೆ ಲೋ.ಇ ಉಪ-ವಿಭಾಗ ಶಾಖಾಧಿಕಾರಿಗಳು ಮತ್ತು ಲೋ.ಇ ಗುಣಭರವಸೆ ಉಪ-ವಿಭಾಗದ ಶಾಖಾಧಿಕಾರಿಗಳು ಸೇರಿ ಸ್ಥಳ ಪರಿವೀಕ್ಷಣೆ ವರದಿ ಸಲ್ಲಿಸಿದ ನಂತರ ಸದರಿ</td></tr>
</table>

| | | |
|---|---|---|
| | ಎಷ್ಟು ಕಟ್ಟಡಗಳನ್ನು 'ಅಸುರಕ್ಷಿತ' ಎಂದು ಗುರುತಿಸಲಾಗಿದೆ; | ಕಟ್ಟಡಗಳು ನೆಲಸಮಗೊಳಿಸಬಹುದೆಂದು ಸಂಬಂದಪಟ್ಟ ಅಧಿಕಾರಿಗಳಿಗೆ ವರದಿ ನೀಡಲಾಗುತ್ತದೆ. 2024-25ನೇ ಸಾಲಿನಲ್ಲಿ ಶಿಥಿಲಾವ್ಯವಸ್ಥೆಯಲ್ಲಿರುವ ಒಟ್ಟು-17 ಕಟ್ಟಡಗಳನ್ನು ನೆಲಸಮಗೊಳಿಸಲು ಅನುಮತಿ ನೀಡಲಾಗಿರುತ್ತದೆ. ಕಟ್ಟಡಗಳ ಸುರಕ್ಷತಾ ಪರಿಶೀಲನೆಯನ್ನು (Safety Audit) ಮಾಡುವುದಿಲ್ಲ. |
| ಇ) | ಕಳೆದ ಎರಡು ವರ್ಷಗಳಲ್ಲಿ ಬಿಡುಗಡೆಯಾದ ಅನುದಾನವೆಷ್ಟು; ಈ ಪೈಕಿ ಎಷ್ಟು ಹಣವನ್ನು ಪ್ರಸಕ್ತ ಸಾಲಿನಲ್ಲಿ ಬಳಸಿಕೊಳ್ಳಲಾಗಿದೆ; | (see table below) ಕಲಬುರಗಿ ಜಿಲ್ಲೆ ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ 2023-24ನೇ ಸಾಲಿನಲ್ಲಿ ಕಟ್ಟಡಗಳ ನಿರ್ವಹಣೆ ಯೋಜನೆಯಡಿಯಲ್ಲಿ ಒಟ್ಟು ರೂ 1093.30 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ. 2024-25ನೇ ಸಾಲಿನಲ್ಲಿ ಕಟ್ಟಡಗಳ ನಿರ್ವಹಣೆ ಯೋಜನೆಯಡಿಯಲ್ಲಿ ಒಟ್ಟು ರೂ.881.00 ಲಕ್ಷಗಳ ಅನುದಾನ ಮಂಜೂರಾಗಿರುತ್ತದೆ ಹಾಗೂ ಪ್ರಸಕ್ತ 2025-26ನೇ ಸಾಲಿನಲ್ಲಿ ಕಲಬುರಗಿ ಜಿಲ್ಲೆಗೆ ಕಟ್ಟಡ ನಿರ್ವಹಣೆಗೆ ಒಟ್ಟು ರೂ.2163.10 ಲಕ್ಷಗಳ ಅನುದಾನ ಬಿಡುಗಡೆಯಾಗಿದ್ದು, ಅದರಲ್ಲಿ ರೂ.1011.69 ಲಕ್ಷಗಳು ಖರ್ಚಾಗಿರುತ್ತದೆ. |
| ಈ) | ಜೀರ್ಣಾವಸ್ಥೆಯಲ್ಲಿರುವ ಅತ್ಯಂತ ಹಳೆಯ ಕಟ್ಟಡಗಳನ್ನು ತೆರವುಗೊಳಿಸಿ, ಅವುಗಳ ಜಾಗದಲ್ಲಿ ಹೊಸ ಕಟ್ಟಡಗಳ ಪುನರ್ ನಿರ್ಮಾಣಕ್ಕೆ (Reconstruction) ಸರ್ಕಾರಕ್ಕೆ ಸಲ್ಲಿಕೆಯಾಗಿರುವ ಪ್ರಸ್ತಾವನೆಗಳ ಸಂಖ್ಯೆ ಎಷ್ಟು; ಈ ಪ್ರಸ್ತಾವನೆಗಳು ಯಾವ ಹಂತದಲ್ಲಿವೆ; | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಜೀರ್ಣಾವಸ್ಥೆಯಲ್ಲಿರುವ ಅತ್ಯಂತ ಹಳೆಯ ಕಟ್ಟಡಗಳನ್ನು ತೆರವುಗೊಳಿಸಿ ಅವುಗಳ ಜಾಗದಲ್ಲಿ ಹೊಸ ಕಟ್ಟಡಗಳ ಪುನರ್‌ನಿರ್ಮಾಣಕ್ಕೆ (Reconstruction) 166 ವಸತಿ ಗೃಹಗಳ ಪ್ರಸ್ತಾವನೆಗಳು ಸಲ್ಲಿಕೆಯಾಗಿದ್ದು, ಅವುಗಳಲ್ಲಿ 64 ವಸತಿ ಗೃಹಗಳು ಅನುಮೋದನೆಗೊಂಡಿದ್ದು, 102 ವಸತಿ ಗೃಹಗಳು ಅನುಮೋದನೆಗೆ ಬಾಕಿ ಇರುತ್ತವೆ. |

| ಕ್ರ. ಸಂ. | ವಿಭಾಗ | ನಿರ್ವಹಣೆ ಯೋಜನೆಯಡಿ ಮಂಜೂರಾದ ಅನುದಾನ ರೂ.ಲಕ್ಷಗಳಲ್ಲಿ | |
|---|---|---|---|
| | | **2023-24** | **2024-25** |
| **1.** | ಕಲಬುರಗಿ | 915.00 | 771.00 |
| **2.** | ಸೇಡಂ | 178.30 | 110.00 |
| | **ಒಟ್ಟು** | **1093.30** | **881.00** |

| | | |
|---|---|---|
| ಉ) | ಕಟ್ಟಡಗಳ ಕಾಮಗಾರಿ ಮತ್ತು ದುರಸ್ತಿಯ ಗುಣಮಟ್ಟವನ್ನು ಪರಿಶೀಲಿಸಲು ಜಿಲ್ಲಾ ಮಟ್ಟದಲ್ಲಿ ತಾಂತ್ರಿಕ ಮೇಲ್ವಿಚಾರಣೆ ತಂಡ (Technical Monitoring Team) ಕಾರ್ಯ ನಿರ್ವಹಿಸುತ್ತಿದೆಯೇ; ಇಲ್ಲದಿದ್ದಲ್ಲಿ, ಕಳಪೆ ಕಾಮಗಾರಿಗಳನ್ನು ತಡೆಯಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು? | ಲೋಕೋಪಯೋಗಿ ಇಲಾಖೆಯ ವ್ಯಾಪ್ತಿಯಲ್ಲಿ ಕೈಗೊಳ್ಳಲಾಗುವ ಕಟ್ಟಡಗಳ ಕಾಮಗಾರಿ ಮತ್ತು ದುರಸ್ಥಿಯ ಗುಣಮಟ್ಟವನ್ನು ಪರಿಶೀಲಿಸಲು ಲೋಕೋಪಯೋಗಿ ಇಲಾಖೆಯ ಗುಣಭರವಸೆ ಅಧಿಕಾರಿಗಳು ಕಾಮಗಾರಿಗಳ ಪರಿವೀಕ್ಷಣೆ ಮಾಡಿ ವರದಿ ನೀಡಿದ ನಂತರ ಗುತ್ತಿಗೆದಾರರಿಗೆ ಬಿಲ್ಲು ಪಾವತಿಸಲಾಗುವುದು. ಈ ಇಲಾಖೆಯಡಿ ಕಳಪೆ ಕಾಮಗಾರಿಗಳು ಆಗಿರುವುದು ಕಂಡುಬಂದಿರುವುದಿಲ್ಲ. |

**ಸಂಖ್ಯೆ: ಲೋಇ 17 ಬಿಎಲ್ ಕ್ಯೂ 2026**

**(ಸತೀಶ ಜಾರಕಿಹೊಳಿ)**
ಲೋಕೋಪಯೋಗಿ ಸಚಿವರು.